ಫೋನ್ : 080-22341391
ಫ್ಯಾಕ್ಸ : 080-22341393

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

**ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು - 560 001.**

ಸಂ.ಕರಾಉಶಿಪ/7ನೇ ಸಾ. ಸಭೆ/2012-13/1527 ದಿನಾಂಕ: 04.01.2013

ಇವರಿಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಎಲ್ಲ ಸದಸ್ಯರುಗಳಿಗೆ.

ಮಾನ್ಯರೇ,

ದಿನಾಂಕ 28.12.2012 ರಂದು ಬೆಳಿಗ್ಗೆ 11-30 ಘಂಟೆಗೆ **ಶ್ರೀ. ಸಿ. ಟಿ. ರವಿ, ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು, ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು** ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಏಳನೆಯ ಸಾಮಾನ್ಯ ಸಭೆಯ ನಡವಳಿಗಳನ್ನು ತಮ್ಮ ಅವಗಾಹನೆಗಾಗಿ ಕಳುಹಿಸಲಾಗಿದೆ.

ಈ ಸಭೆಯ ನಡವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರದ ದಿನಾಂಕದಿಂದ 10 ದಿನದೊಳಗಾಗಿ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

(ಕೆ.ಎಂ. ಕಾವೇರಿಯಪ್ಪ)
ಕಾರ್ಯನಿರ್ವಾಹಕ ನಿರ್ದೇಶಕರು

ಅಡಕ: ಮೇಲಿನಂತೆ.

**<u>ಪ್ರತಿಗಳನ್ನು ಮಾಹಿತಿಗಾಗಿ:</u>**

1. ಉನ್ನತ ಶಿಕ್ಷಣ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು, 2 ನೇ ಮಹಡಿ, ಕೊಠಡಿ ಸಂ. 252, ವಿಧಾನಸೌಧ, ಬೆಂಗಳೂರು.
2. ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, 2 ನೇ ಮಹಡಿ, ಕೊಠಡಿ ಸಂ. 252, ವಿಧಾನಸೌಧ, ಬೆಂಗಳೂರು.
3. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಅರಮನೆ ರಸ್ತೆ, ಬೆಂಗಳೂರು-01.

## ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು

ದಿನಾಂಕ 28.12.2012 ರಂದು ಬೆಳಿಗ್ಗೆ 11–30 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಏಳನೆಯ ಸಾಮಾನ್ಯ ಸಭೆಯ ನಡೆವಳಿಗಳು.

**<u>ಉಪಸ್ಥಿತ ಸದಸ್ಯರು</u>**

| | | |
|---|---|---|
| 1) | ಶ್ರೀ ಸಿ. ಟಿ. ರವಿ<br>ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. | ಅಧ್ಯಕ್ಷರು |
| 2) | ಡಾ॥ ಎಸ್.ಸಿ. ಶರ್ಮಾ,<br>ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ,<br>ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. | ಉಪಾಧ್ಯಕ್ಷರು |
| 3) | ಪ್ರೊ. ಕೆ.ಎಂ. ಕಾವೇರಿಯಪ್ಪ<br>ಸದಸ್ಯ ಕಾರ್ಯದರ್ಶಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. | ಸದಸ್ಯ ಕಾರ್ಯದರ್ಶಿಗಳು |
| 4) | ಪ್ರೊ. ಬಿ. ಶಿವರಾಜ್<br>ಹಂಗಾಮಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, | ಸದಸ್ಯರು |
| 5) | ಪ್ರೊ. ಎಸ್. ರಂಗಸ್ವಾಮಿ<br>ಹಂಗಾಮಿ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, | ಸದಸ್ಯರು |
| 6) | ಡಾ॥ ಹೆಚ್.ಬಿ. ವಾಲೀಕಾರ<br>ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, | ಸದಸ್ಯರು |
| 7) | ಪ್ರೊ. ಈ.ಟಿ. ಪುಟ್ಟಯ್ಯ<br>ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, | ಸದಸ್ಯರು |
| 8) | ಪ್ರೊ. ಟಿ.ಸಿ. ಶಿವಶಂಕರಮೂರ್ತಿ<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ, | ಸದಸ್ಯರು |
| 9) | ಪ್ರೊ. ಹೆಚ್. ಸಿ. ಬೋರಲಿಂಗಯ್ಯ<br>ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ | ಸದಸ್ಯರು |
| 10) | ಪ್ರೊ. ಬಿ.ಆರ್. ಅನಂತನ್<br>ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, | ಸದಸ್ಯರು |
| 11) | ಪ್ರೊ. ಹನುಮಣ್ಣ ನಾಯಕ ದೊರೆ<br>ಕುಲಪತಿಗಳು, ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ. | ಸದಸ್ಯರು |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

| | | |
|---|---|---|
| 12) | **ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್**<br>ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, | ಸದಸ್ಯರು |
| 13) | **ಪ್ರೊ. ಹೆಚ್. ಮಹೇಶಪ್ಪ**<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, | ಸದಸ್ಯರು |
| 14) | **ಪ್ರೊ. ಅಂಬಳಿಕೆ ಹಿರಿಯಣ್ಣ**<br>ಕುಲಪತಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, | ಸದಸ್ಯರು |
| 15) | **ಡಾ॥ ಎಂ.ಡಿ. ಮುತ್ತಮ್ಮ**<br>ನಿವೃತ್ತ ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು. | ಸದಸ್ಯರು |
| 16) | **ಡಾ॥ ಪಿ. ವೆಂಕಟರಾಮಯ್ಯ**<br>(ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ)<br>ಮೈಸೂರು. | ಸದಸ್ಯರು |
| 17) | **ಡಾ॥ ಎಸ್. ಸುಧಾ**<br>ನಿವೃತ್ತ ಪ್ರಾಂಶುಪಾಲರು, ಮಹಾರಾಣಿ ವಿಜ್ಞಾನ ಕಾಲೇಜು,<br>ಮೈಸೂರು. | ಸದಸ್ಯರು |
| 18) | **ಡಾ॥ ಕೆ. ಚಿದಾನಂದಗೌಡ**<br>(ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ)<br>ಮೈಸೂರು. | ಸದಸ್ಯರು |
| 19) | **ಶ್ರೀ ಸಿದ್ದಯ್ಯ, ಐಎಎಸ್**<br>ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, | ಸದಸ್ಯರು |
| 20) | **ಶ್ರೀ ಕೆ. ಎಸ್. ಪ್ರಭಾಕರ್ ಐಎಎಸ್**<br>ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, | ಸದಸ್ಯರು |
| 21) | **ಪ್ರೊ. ಹೆಚ್. ಯು. ತಳವಾರ್**<br>ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ. | ಸದಸ್ಯರು |
| 22) | **ಶ್ರೀ. ಎ. ರವೀಂದ್ರ ಐಎಎಸ್, [ನಿ]**<br>ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು,<br>ವಿಧಾನಸೌಧ, ಬೆಂಗಳೂರು. | ವಿಶೇಷ ಆಹ್ವಾನಿತರು |
| 23) | **ಶ್ರೀ ಎಂ. ಕೆ. ಶ್ರೀಧರ್**<br>ಸದಸ್ಯ-ಕಾರ್ಯದರ್ಶಿ,<br>ಕರ್ನಾಟಕ ಜ್ಞಾನ ಆಯೋಗ | ವಿಶೇಷ ಆಹ್ವಾನಿತರು |

ಸಭೆಯ ಪ್ರಾರಂಭದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ. ಎಸ್. ಸಿ. ಶರ್ಮಾರವರು ಸನ್ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

ಸಭೆಯ ಪ್ರಾರಂಭದಲ್ಲಿ ಸನ್ಮಾನ್ಯ ಅಧ್ಯಕ್ಷರು ಉನ್ನತ ಶಿಕ್ಷಣ ಪರಿಷತ್ತಿನ ಸದಸ್ಯರು ತಮ್ಮ ಪರವಾಗಿ ಪ್ರತಿನಿಧಿಗಳನ್ನು ಕಳುಹಿಸಿರುವುದನ್ನು ಗಮನಿಸಿ, ಉನ್ನತ ಶಿಕ್ಷಣ ಪರಿಷತ್ತಿನ ಅಧಿನಿಯಮದಲ್ಲಿ ಪ್ರತಿನಿಧಿಗಳನ್ನು ನಿಯೋಜಿಸಲು ಅವಕಾಶವಿಲ್ಲದಿರುವುದರಿಂದ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸುವಂತಿಲ್ಲವೆಂದು ತಿಳಿಸಿದರು. ಇಂದಿನ ಸಭೆಗೆ ಆಗಮಿಸಿರುವ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿರಬಹುದು ಆದರೆ ಚರ್ಚೆಯಲ್ಲಿ ಭಾಗವಹಿಸುವಂತಿಲ್ಲವೆಂದು ಸೂಚಿಸಿದರು.

| ವಿಷಯ ಸಂಖ್ಯೆ | ವಿಷಯಗಳು |
|---|---|
| ವಿಷಯ ಸಂಖ್ಯೆ 1 | ದಿನಾಂಕ 20–06–2012 ರಂದು ಜರುಗಿದ ಆರನೆಯ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸುವ ಕುರಿತು.<br><br>**ನಿರ್ಣಯ:**<br><br>ದಿನಾಂಕ 20–06–2012 ರಂದು ಜರುಗಿದ ಆರನೆಯ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸಲಾಯಿತು. |
| ವಿಷಯ ಸಂಖ್ಯೆ 2 | ವಿವಿಧ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಪ್ರವೇಶ, ವಲಸೆ ಇತ್ಯಾದಿ ವಿಷಯಗಳ ಕುರಿತು ಏಕರೂಪದ ಕರಡು ಪರಿನಿಯಮಾವಳಿಗಳ ಪರಿಶೀಲನೆ ಕುರಿತು.<br><br>**ನಿರ್ಣಯ:**<br><br>ಪ್ರೊ. ವಿ.ಜಿ ತಳವಾರ್ ಕಮಿಟಿಯ ವರದಿ ಮತ್ತು ಇತರ ಮೂರು ವಿಶ್ವವಿದ್ಯಾಲಯಗಳಿಂದ ಅಂದರೆ ಮಂಗಳೂರು, ಕರ್ನಾಟಕ ಮತ್ತು ತುಮಕೂರು ವಿಶ್ವವಿದ್ಯಾಲಯಗಳಿಂದ ಬಂದ ಅಭಿಪ್ರಾಯಗಳಿಗೆ ಪರಿಷತ್ತು ಒಪ್ಪಿಗೆ ಸೂಚಿಸಿ ಇವುಗಳನ್ನು ಸಂಬಂಧಪಟ್ಟ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕಳುಹಿಸಿ ವಿಶ್ವವಿದ್ಯಾಲಯಗಳ ಪ್ರವೇಶ, ವಲಸೆ, ಪರೀಕ್ಷೆ ಇತ್ಯಾದಿ ಪರಿನಿಯಮಾವಳಿಗಳನ್ನು ರೂಪಿಸಿಕೊಂಡು ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡುವಂತೆ ಅಭಿಪ್ರಾಯಪಡಲಾಯಿತು. |
| ವಿಷಯ ಸಂಖ್ಯೆ 3 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2010–11 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು.<br><br>**ನಿರ್ಣಯ:**<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2010–11 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು. |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

| | |
|---|---|
| ವಿಷಯ ಸಂಖ್ಯೆ 4 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2011-12 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು.<br><br>**ನಿರ್ಣಯ:**<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2011-12 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ 5 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2010-11 ನೇ ಸಾಲಿನ ಲೆಕ್ಕಪತ್ರಗಳ ವಾರ್ಷಿಕ ತಃಖ್ತೆಯನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು.<br><br>**ನಿರ್ಣಯ:**<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2010-11 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಅದಕ್ಕೆ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ 6 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2011-12 ನೇ ಸಾಲಿನ ಲೆಕ್ಕಪತ್ರಗಳ ವಾರ್ಷಿಕ ತಃಖ್ತೆಯನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು.<br><br>**ನಿರ್ಣಯ:**<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2011-12 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಅದಕ್ಕೆ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ 7 | ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ, ಮಹಾವಿದ್ಯಾಲಯಗಳಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಎಂ.ಫಿಲ್, ಪಿ.ಎಚ್.ಡಿ, ಪದವಿಗಳನ್ನು ಹೊಂದಿರುವ ಉಪನ್ಯಾಸಕರು ಮಾತ್ರ ಬಿ.ಕಾಂ, ಬಿ.ಬಿ.ಎಂ, ಬಿ.ಎಚ್.ಎಂ, ಎಂ.ಬಿ.ಎ, ಕೋರ್ಸುಗಳಲ್ಲಿ ಬರುವ ಅರ್ಥಶಾಸ್ತ್ರ ವಿಷಯವನ್ನು ಭೋಧಿಸುವ ಕುರಿತು ಪ್ರೊ॥ ಬಿಸಲಯ್ಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 17.07.2012 ರಂದು ಜರುಗಿದ ಸಮಿತಿಯ ಮರು ಪರಿಶೀಲನಾ ವರದಿ ಕುರಿತು.<br><br>**ನಿರ್ಣಯ:**<br><br>ಮೇಲೆ ಕಾಣಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರೊ॥ ಬಿಸಲಯ್ಯ ಸಮಿತಿಯ ವರದಿ ಮತ್ತು ಅವರ ಒಟ್ಟಾರೆ ಅಭಿಪ್ರಾಯಗಳನ್ನು ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ವಿವರವಾಗಿ ಚರ್ಚಿಸಿ ಪರಿಷತ್ತು ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿತು.<br>ವಿಶ್ವವಿದ್ಯಾಲಯಗಳಲ್ಲಿ ನಡೆಸುವ ಕೋರ್ಸ್‌ಗಳನ್ನು ಸ್ಥಾಪನೆಮಾಡಲು ಮತ್ತು ಅವುಗಳನ್ನು ಭೋದನೆ ಮಾಡಲು ಅರ್ಹ ಆಧ್ಯಾಪಕರ ವಿಧ್ಯಾರ್ಹತೆಯನ್ನು ನಿರ್ಧರಿಸುವ ಅಧಿಕಾರವು ವಿಶ್ವವಿದ್ಯಾಲಯಗಳಿಗೆ |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

| | |
|---|---|
| | ಇರುವುದರಿಂದ ಮೇಲಿನ ವಿಷಯದ ಬಗ್ಗೆ ಆಯಾ ವಿಶ್ವವಿದ್ಯಾಲಯಗಳೇ ನಿರ್ಧಾರ ಕೈಗೊಳ್ಳುವುದು ಸೂಕ್ತ ಎಂಬುದಾಗಿ ಅಭಿಪ್ರಾಯಪಟ್ಟಿತು ಅಲ್ಲದೆ ಯಾವುದೇ ವಿಷಯವು ಅಂತರಶಿಕ್ಷಣ ವಿಷಯ (Inter disciplinary subject) ಆಗಿದ್ದಲ್ಲಿ, ಅಂತಹ ಅಧ್ಯಯನ ಮಂಡಳಿಗೆ ಇತರ ಸಂಬಂಧಪಟ್ಟ ವಿಷಯಗಳ ತಜ್ಞರನ್ನು ಸೇರಿಸಿಕೊಳ್ಳುವುದು ಒಳಿತು ಎಂಬುದಾಗಿ ಅಭಿಪ್ರಾಯಪಟ್ಟಿತು.<br>ಇದರ ಬಗ್ಗೆ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ ತಿಳಿಸಲು ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆಯಬೇಕೆಂದು ಅಭಿಪ್ರಾಯಪಟ್ಟಿತು. |
| ವಿಷಯ ಸಂಖ್ಯೆ 8 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ಇಬ್ಬರು ಕುಲಪತಿಗಳನ್ನು ಹಾಗೂ 4 ಜನ ಶೈಕ್ಷಣಿಕ ತಜ್ಞರಾದ ಪರಿಷತ್ತಿನ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಕ್ರಮದ ಅನುಸಮರ್ಥನೆ ಕುರಿತು.<br>**ನಿರ್ಣಯ:**<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ಇಬ್ಬರು ಕುಲಪತಿಗಳು ಹಾಗೂ 4 ಜನ ಶೈಕ್ಷಣಿಕ ತಜ್ಞರಾದ ಸದಸ್ಯರುಗಳನ್ನು ಪರಿಷತ್ತಿನ ಅಧಿನಿಯಮದ ಪ್ರಕಾರ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ನೇಮಕ ಮಾಡಿ ಕೈಕೊಂಡ ಕ್ರಮ ಅನುಸಮರ್ಥಿಸಲಾಯಿತು. |
| ವಿಷಯ ಸಂಖ್ಯೆ 9 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಆಡಳಿತಾಧಿಕಾರಿಯ ನೇಮಕ ಕುರಿತು.<br>**ನಿರ್ಣಯ:**<br>ಪ್ರಸ್ತುತ ಇರುವ ಅಧೀಕ್ಷಕರ ಹುದ್ದೆಯನ್ನು ಸಹಾಯಕ ಕುಲಸಚಿವ ಹುದ್ದೆಗೆ ಉನ್ನತೀಕರಿಸಿ ದಿನಾಂಕ: 26–03–2012 ರಿಂದ ಶ್ರೀ. ಅಶೋಕ ಕುಲಕರ್ಣಿ ರವರನ್ನು ಸಹಾಯಕ ಕುಲಸಚಿವರ ಹುದ್ದೆಗೆ ಅವರ ನಿಯೋಜನೆಯ ಅವಧಿವರೆಗೆ ಸಹಾಯಕ ಕುಲಸಚಿವ (ಆಡಳಿತ) ರನ್ನಾಗಿ ಮಾಡುವ ಪ್ರಸ್ತಾವನೆಗೆ ಸರ್ಕಾರ ಒಪ್ಪಿಗೆಯನ್ನು ಕಾಯ್ದಿರಿಸಿ ಕಾರ್ಯಗತಗೊಳಿಸುವ ಪ್ರಸ್ತಾವನೆಯನ್ನು ಸಮಿತಿಯು ಅನುಸಮರ್ಥನೆಗೊಳಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು ಹಾಗೂ ಆಡಳಿತಾಧಿಕಾರಿಗೆ ಶೈಕ್ಷಣಿಕ ಆಡಳಿತ ಹಾಗೂ ಸಹಾಯಕ ಕುಲಸಚಿವರಿಗೆ ಸಾಮಾನ್ಯ ಆಡಳಿತ ಕೆಲಸ ನಿರ್ವಹಿಸುವುದು ಸೂಕ್ತ ಎಂದು ಕಾರ್ಯನಿರ್ವಾಹಕ ಸಮಿತಿಯ ಪ್ರಸ್ತಾವನೆಯನ್ನು ಪರಿಷತ್ತು ಒಪ್ಪಿಕೊಂಡಿತು. |
| ವಿಷಯ ಸಂಖ್ಯೆ 10 | ಜಾನಪದ ವಿಷಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಗಳಿಸಿದ ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಕ್ಕೆ ಅವಕಾಶ ಕಲ್ಪಿಸುವ ಕುರಿತು.<br>**ನಿರ್ಣಯ:**<br>ವಿಷಯ ಸಂಖ್ಯೆ 10 ಮತ್ತು 11 ಇವುಗಳನ್ನು ವಿವರವಾಗಿ ಪರಿಶೀಲಿಸಿ ಸೂಕ್ತ ವರದಿಯನ್ನು ತಯಾರಿಸಲು ಒಂದು ಸಮಿತಿ ರಚಿಸುವಂತೆ ಪರಿಷತ್ತು ಅಭಿಪ್ರಾಯಪಟ್ಟು ಸಮಿತಿಯನ್ನು ರಚಿಸುವ ಅಧಿಕಾರವನ್ನು ಸನ್ಮಾನ್ಯ ಅಧ್ಯಕ್ಷರಿಗೆ ನೀಡಲಾಯಿತು. |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

| | |
|---|---|
| ವಿಷಯ ಸಂಖ್ಯೆ 11 | ವಿವಿಧ ಪದವಿ ಕೋರ್ಸುಗಳ ಸಮಾನಾಂತರ ಕುರಿತು.<br><br>**ನಿರ್ಣಯ:**<br><br>ವಿಷಯ ಸಂಖ್ಯೆ 10 ಮತ್ತು 11 ಇವುಗಳನ್ನು ವಿವರವಾಗಿ ಪರಿಶೀಲಿಸಿ ಸೂಕ್ತ ವರದಿಯನ್ನು ತಯಾರಿಸಲು ಒಂದು ಸಮಿತಿ ರಚಿಸುವಂತೆ ಪರಿಷತ್ತು ಅಭಿಪ್ರಾಯಪಟ್ಟು ಸಮಿತಿಯನ್ನು ರಚಿಸುವ ಅಧಿಕಾರವನ್ನು ಸನ್ಮಾನ್ಯ ಅಧ್ಯಕ್ಷರಿಗೆ ನೀಡಲಾಯಿತು. |
| ವಿಷಯ ಸಂಖ್ಯೆ 12 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ನೇಮಕಾತಿ ಪರಿನಿಯಮಗಳು – 2012 ಅನುಮೋದನೆ ಕುರಿತು.<br><br>**ನಿರ್ಣಯ:**<br><br>ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ನೇಮಕಾತಿ ಪರಿನಿಯಮಗಳು – 2012ಕ್ಕೆ ಕಾರ್ಯಕಾರಿ ಸಮಿತಿಯ ಶಿಫಾರಸ್ಸನ್ನು ಪರಿಗಣಿಸಿ ಪರಿನಿಯಮಗಳಿಗೆ ಒಪ್ಪಿಗೆ ನೀಡಲಾಯಿತು. |
| ವಿಷಯ ಸಂಖ್ಯೆ 13 | Converting the Existing affiliating (Karnataka State Women University) to a Non-affiliating Unitary University. Opinion of the Executive Committee (meeting held on 10.05.2012).<br>**ನಿರ್ಣಯ:**<br><br>ಈ ವಿಷಯವು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿದ್ದಾಗಿದ್ದು ಸಭೆಯಲ್ಲಿ ಆ ವಿಶ್ವವಿದ್ಯಾಲಯದ ಕುಲಪತಿಗಳು ಹಾಜರಿಲ್ಲದ ಕಾರಣ ಈ ವಿಷಯದ ಬಗ್ಗೆ ಅಭಿಪ್ರಾಯವನ್ನು ಕೇಳಿ ಮುಂದಿನ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಸಭೆಯು ನಿರ್ಣಯಿಸಿತು. |
| ವಿಷಯ ಸಂಖ್ಯೆ 14 | ರಾಜ್ಯದ ಪದವಿ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಷಯವನ್ನು ಪದವಿ ಮಟ್ಟದಲ್ಲಿ ಪಠ್ಯ ವಿಷಯವಾಗಿ ಸೇರಿಸುವ ಕುರಿತು.<br><br>**ನಿರ್ಣಯ:**<br><br>ರಾಜ್ಯದ ಪದವಿ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಷಯವನ್ನು ಪದವಿ ಮಟ್ಟದಲ್ಲಿ ಪಠ್ಯ ವಿಷಯವಾಗಿ ಸೇರಿಸಬೇಕೆಂಬ ಮನವಿಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬಹುದೆಂದು ಪರಿಷತ್ತು ಅಭಿಪ್ರಾಯಪಟ್ಟಿತು. |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

| | |
|---|---|
| ವಿಷಯ ಸಂಖ್ಯೆ 15 | ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ "ಗುರುಕುಲ ಮಾದರಿ" (Gurukula System) ಕರಡು ವಿನಿಯಮಗಳ ಅನುಮೋದನೆ ಬಗ್ಗೆ.<br><br>**ನಿರ್ಣಯ:**<br><br>ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ "ಗುರುಕುಲ ಮಾದರಿ" (Gurukula System) ಕರಡು ವಿನಿಯಮಗಳನ್ನು ವಿವರವಾಗಿ ಪರಿಶೀಲಿಸಿದಾಗ ವಿನಿಮಯಗಳಲ್ಲಿ ಡಿಪ್ಲೊಮಾ ಮತ್ತು ಪದವಿಗಳಿಗೆ ಕಾಣಿಸಿರುವ ವಿಧ್ಯಾರ್ಥಿಗಳ ವಿಧ್ಯಾರ್ಹತೆ ಒಂದು ವಿಶ್ವವಿದ್ಯಾಲಯದ ಡಿಪ್ಲೊಮೊ ಮತ್ತು ಪದವಿಗಳಿಗೆ ಸಾಮಾನ್ಯವಾಗಿ ನಿಶ್ಚಯಿಸುವ ವಿದ್ಯಾರ್ಹತೆಗಿಂತ ಭಿನ್ನವಾಗಿರುವುದರಿಂದ ಈ ವಿಷಯವನ್ನು ವಿಶ್ವವಿದ್ಯಾಲಯವು ಮತ್ತೊಮ್ಮೆ ವಿಶ್ವವಿದ್ಯಾಲಯದ ಅಧಿನಿಯಮದ ಚೌಕಟ್ಟಿನಲ್ಲಿ ಪರಿಶೀಲಿಸಿ ವಿನಿಮಯಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡುವುದು ಸೂಕ್ತ ಎಂಬುದಾಗಿ ತೀರ್ಮಾನಿಸಲಾಯಿತು. |

**ಇತರೆ ವಿಷಯಗಳು:**

1) To a suggestion that there should be a compendium of university Theses and Research Publications, the Council felt that the matter has already been attended to by UGC and the Universities have already taken steps in this regard.

2) ಸನ್ಮಾನ್ಯ ಅಧ್ಯಕ್ಷರು ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕದಲ್ಲಿ ಮಾಡಿರುವ ಪ್ರಮುಖ ನಿರ್ಧಾರಗಳ ಬಗ್ಗೆ ಅದರಲ್ಲೂ ಹೊಂದಿರಬೇಕಾದ ಜಮೀನು, ಕರ್ನಾಟಕ ರಾಜ್ಯದಿಂದ ಆಯ್ಕೆಯಾಗುವಂತಹ ವಿಧ್ಯಾರ್ಥಿಗಳ ಪ್ರಮಾಣ ಅವರು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಕಲಿಯಲು ಪಾವತಿಸಬೇಕಾದ ಶುಲ್ಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ವಿಧೇಯಕವನ್ನು ಮೀರಿ ನಡೆದರೆ ಅಂತಹ ವಿಶ್ವವಿದ್ಯಾಲಯಗಳಿಗೆ ಸರ್ಕಾರದಿಂದ ದಂಡ ಮತ್ತು ಮಾನ್ಯತೆಯನ್ನು ರದ್ದು ಮಾಡುವಂಥಹ ಅವಕಾಶವನ್ನು ಅಧಿನಿಯಮಗಳಲ್ಲಿ ಕಲ್ಪಿಸಲಾಗಿದೆಯೆಂದು ತಿಳಿಸಿದರು.

3) ಕುಲಪತಿಗಳು ವಿಶ್ವವಿದ್ಯಾಲಯಗಳ ಹಣಕಾಸು ಪರಿಸ್ಥಿತಿಯ ಬಗ್ಗೆ ಮಾಡಿದ ಪ್ರಸ್ತಾವನೆಗೆ ದಿನಾಂಕ 31.12.2012 ಸಾಯಂಕಾಲ 4–00 ಘಂಟೆಗೆ ಉನ್ನತ ಶಿಕ್ಷಣ ಇಲಾಖೆಯ ಹಾಗೂ ಸಂಬಂಧಿಸಿದ ಅಧಿಕಾರಿಗಳ ಮತ್ತು ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆ ಆಯೋಜಿಸಲಾಗಿದ್ದು ಅಲ್ಲಿ ವ್ಯಕ್ತವಾಗುವ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಸಭೆಯು ವಂದನಾರ್ಪಣೆಯೊಂದಿಗೆ ಕೊನೆಗೊಂಡಿತು.

| | | |
|---|---|---|
| ಸಹಿ/– | ಸಹಿ/– | ಸಹಿ/– |
| ಶ್ರೀ. ಸಿ. ಟಿ. ರವಿ | ಪ್ರೊ|| ಎಸ್. ಸಿ. ಶರ್ಮಾ | ಪ್ರೊ|| ಕೆ. ಎಂ. ಕಾವೇರಿಯಪ್ಪ |
| ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯ ಕಾರ್ಯದರ್ಶಿಗಳು |
| ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು
ಬೆಂಗಳೂರು.